ಸಿ.ಸಿ. ನಂಬ್ರ: 1372/2023 ಪ್ರಾಸಾ:1
ದಿನಾಂಕ: 27.03.2026

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಸಾಕ್ಷಿ ಮಾದರಿಗಾಗಿ ಸಂಗ್ರಹಿಸಿದ್ದ ಅಕ್ಕಿ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಕೆ ಪಿ ಎಸ್ ರವರಿಂದ:**

ಪಿರ್ಯಾದುದಾರರು ನಮ್ಮ ಠಾಣೆಗೆ ಸದ್ರಿ ದಿನ 5-30 ಗಂಟೆಗೆ ಬಂದಿರುತ್ತಾರೆ. ಅಕ್ರಮ ಅಕ್ಕಿ ಸಾಗಾಟದ ಬಗ್ಗೆ ಚಾಸಾ-1 ರವರಿಗೆ ಮಾಹಿತಿ ಬಂದಿದ್ದು ಅದನ್ನು ಅವರು ಠಾಣೆಗೆ ಬಂದು ಠಾಣೆಯ ಪಿ ಎಸ್ ಐ ರವರಿಗೆ ಮಾಹಿತಿ ನೀಡಿರುತ್ತಾರೆ. ಆ ವೇಳೆಗೆ ಪಿ ಎಸ್ ಐ ರವರು ಠಾಣೆಯಲ್ಲಿ ಇದ್ದರು. ಚಾಸಾ-1 ರವರಿಗೆ ಬಂದ ಮಾಹಿತಿಯನ್ನು ಪಿ ಎಸ್ ಐ ರವರಿಗೆ ಲಿಖಿತವಾಗಿ ನೀಡಿ ಹೋಗಿರಲಿಲ್ಲ. ಅವರು ತಮಗೆ ಬಂದ ಮಾಹಿತಿಯನ್ನು ನಮಗೆ ಮೊದಲೇ ಠಾಣೆಯಲ್ಲಿ ತಿಳಿಸಿ ಹೋಗಿರುತ್ತಾರೆ ಎಂದರೆ ಸರಿ. ಅದರ ಆಧಾರದಲ್ಲಿ ದಾಳಿಗೆ ಹೋಗುವ ಮೊದಲು ಪ್ರ.ವ.ವರದಿ ತಯಾರಿಸಿಲ್ಲ. ನಿಖರವಾದ ಸ್ಥಳದಲ್ಲಿ ಅಕ್ರಮ ಅಕ್ಕಿ ದಾಸ್ತಾನು ಇರುವ ಬಗ್ಗೆ ತಿಳಿಸಿ ನನ್ನನ್ನು ಕಳುಹಿಸಿಕೊಟ್ಟಿರುತ್ತಾರೆ. ನಾನು ದಾಳಿಗೆ ಹೋಗಿದ್ದ ವಿಚಾರ ನಮ್ಮ ಠಾಣಾ ದಿನಚರಿಯಲ್ಲಿ ಕಂಡು ಬರುತ್ತದೆ ಎಂದರೆ ಸರಿ. ಆ ಬಗ್ಗೆ ದಾಖಲಾತಿಯನ್ನು ತನಿಖಾಧಿಕಾರಿಯವರಿಗೆ ನೀಡಿರುವುದಿಲ್ಲ.

ಸದ್ರಿ ದಿನ ನಾವು ಠಾಣೆಯಿಂದ 5-30ಕ್ಕೆ ಹೊರಟಿರುತ್ತೇವೆ. 7-15 ಗಂಟೆಗೆ ಪುನಃ ಠಾಣೆಗೆ ಹಿಂದಿರುಗಿರುತ್ತೇವೆ. ಠಾಣೆಯಿಂದ ಸದ್ರಿ ದಿನ ನಾನು ಮತ್ತು ಚಾಸಾ-1 ರವರು ಖಾಸಗಿ Swift ಕಾರಿನಲ್ಲಿ ಹೋಗಿರುತ್ತೇವೆ. ಅದರ ಚಾಲಕ ಚಾಸಾ-1 ರವರ ಸಿಬ್ಬಂದಿಯಾಗಿರುತ್ತಾರೆ. ಅವರ ಹೆಸರು ಮತ್ತು ವಿಳಾಸ ನನಗೆ ತಿಳಿದಿಲ್ಲ. ಚಾಸಾ-3 ಮತ್ತು 4 ರವರಿಗೆ ವಿಚಾರ ತಿಳಿಸಿ ನಮ್ಮೊಂದಿಗೆ ಕರೆದುಕೊಂಡು ಹೋಗಿರುತ್ತೇವೆ. ಅವರಿಗೆ ದಾಳಿ ಬಗ್ಗೆ ಮಾಹಿತಿ ನೀಡಿ ಸಹಕರಿಸುವಂತೆ ಕೋರಿ ಬರಮಾಡಿಕೊಂಡಿರುತ್ತೇವೆ. ಅವರು ಕೊಡಪಾಡಿ ಜಂಕ್ಷನ್ ನಲ್ಲಿ ಸಿಕ್ಕಿರುತ್ತಾರೆ. ಅವರು ನನಗೆ ಪೂರ್ವ ಪರಿಚಿತರು. ವಿಚಾರ ಏನು ಎಂಬುವುದನ್ನು ಚಾಸಾ-1 ರವರು ಅವರಿಗೆ ತಿಳಿಸಿರುತ್ತಾರೆ.

2ನೇ ಆರೋಪಿಯ ಪೂರ್ವ ಪರಿಚಯವಿರಲಿಲ್ಲ. ಅವರ ಮನೆಯ ವಿಳಾಸ ಚಾಸಾ-1ರವರ ಮಾಹಿತಿದಾರರಿಂದ ತಿಳಿದು ಬಂದಿರುತ್ತದೆ. ಚಾಸಾ-2ರವರ ಸುತ್ತಮುತ್ತಲೂ ವೆಲರೇಯನ್ ಡಯಾಸ್ ಮತ್ತು ಶಾರದಾರವರ ಮನೆ ಇದೆ ಎಂದರೆ ಸರಿ. ನಾವು ಸ್ಥಳಕ್ಕೆ ಹೋದಾಗ ಅಕ್ಕಪಕ್ಕದವರು ಯಾರೂ ಸೇರಿರಲಿಲ್ಲ. ನಾವು ಹೋದಾಗ 2ನೇ ಆರೋಪಿಯ ಮನೆಯಲ್ಲಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ನಾನು ಅಥವಾ ಚಾಸಾ-1ರವರು ಅಕ್ಕಪಕ್ಕದವರನ್ನು ಸಾಕ್ಷಿದಾರರನ್ನಾಗಿ ಬರಮಾಡಿಕೊಳ್ಳಲಿಲ್ಲ. ಸದ್ರಿ ಸ್ಥಳ 1ನೇ ಆರೋಪಿಗೆ ಸಂಬಂಧಿಸಿದ್ದು ಎಂಬ ಬಗ್ಗೆ ಯಾವುದೇ ದಾಖಲಾತಿಗಳನ್ನು ಅಲ್ಲಿ ಪರಿಶೀಲಿಸಿಲ್ಲ.

ಪಂಚನಾಮೆಯನ್ನು ಚಾಸಾ-1 ರವರು ಬರೆದಿರುತ್ತಾರೆ. ಪಂಚನಾಮೆಯಲ್ಲಿ ನಮೂದಿಸಿದ ಮನೆ 2ನೇ ಆರೋಪಿಗೆ ಸಂಬಂಧಿಸಿದ್ದು ಎಂಬ ಬಗ್ಗೆ ಯಾವುದೇ ವಿವರಣೆಯನ್ನು ನಿಪಿ-2 ರಲ್ಲಿ ನಮೂದಿಸಿಲ್ಲ. ಅದು ಹೆಂಚಿನ ಮನೆ. ಆ ಮನೆಗೆ 2 ಕೋಣೆಗಳು ಇದ್ದವು. ನಾವು ಅಥವಾ ಚಾಸಾ-1 ರವರು ಸದ್ರಿ ಮನೆಯಲ್ಲಿ ಯಾರು ವಾಸ್ತವ್ಯ ಇದ್ದರು ಎಂದು ವಿಚಾರಿಸಿಲ್ಲ. ನಾವು ಅಲ್ಲಿಗೆ ಭೇಟಿ ನೀಡಿದಾಗ 1ನೇ ಆರೋಪಿ ಇರಲಿಲ್ಲ. 2ನೇ ಆರೋಪಿಯು 1ನೇ ಆರೋಪಿಯೇ ಅಕ್ಕಿ ದಾಸ್ತಾನು ಮಾಡಿದ್ದು ಎಂದದು ನೀಡಿದ ಮಾಹಿತಿ ಮೇರೆಗೆ ಆತನನ್ನು ಆಪಾದಿತನಾಗಿ ಕಾಣಿಸಿರುತ್ತೇವೆ. ನನ್ನಸಮಕ್ಷಮ ಚಾಸಾ-1 ರವರು ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲಾತಿಗಳನ್ನು ಪಡೆಯಲಿಲ್ಲ.

2ನೇ ಆರೋಪಿಯು ಸದ್ರಿ ಅಕ್ಕಿಯನ್ನು ದಾಸ್ತಾನು ಮಾಡಿದ ಬಗ್ಗೆ ಹಾಗೂ ಬೇರೆಯವರಿಂದ ಖರೀದಿಸಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ನನ್ನ ಸಮಕ್ಷಮ ವಶಕ್ಕೆ ಪಡೆದಿಲ್ಲ. ಮನೆಯ ಒಳಗೆ ಶೋಧನೆ ಮಾಡುವ ಮೊದಲು ಚಾಸಾ-1 ರವರು ವಾರಂಟನ್ನು ತೆಗೆದುಕೊಂಡು ಬಂದಿರಲಿಲ್ಲ. ಮನೆಯ ಬಾಗಿಲು ಪೂರ್ವ ದಿಕ್ಕಿಗೆ ಇತ್ತು. ಸದ್ರಿ ದಿನ ಅಕ್ಕಿ ಮನೆಯ ಪಶ್ಚಿಮದ ರೂಂನಲ್ಲಿತ್ತು. ಅಕ್ಕಿಚೀಲವನ್ನು ಬಳ್ಳಿಯಿಂದ ಹೊಲಿದಿದ್ದರು. ಒಂದು ಲೈನ್ ನಲ್ಲಿ ಎಷ್ಟು ಚೀಲಗಳು ಇದ್ದವು ಎಂದು ನಾನು ನೋಡಿಲ್ಲ. ಸದ್ರಿ ಚೀಲಗಳಿಗೆ ನಾನು ಮತ್ತು ಚಾಸಾ-1 ರವರು ನಂಬರ್ ನೀಡಲಿಲ್ಲ. ಅಕ್ಕಿ ಪಾಲಿಥೀನ್ ಚೀಲದಲ್ಲಿತ್ತು.

ಸರಕಾರದಿಂದ ವಿತರಿಸುವ ಅಕ್ಕಿ ಹಾಗೂ ರೈಸ್ ಮಿಲ್ ನಲ್ಲಿ ಸಿಗುವ ಅಕ್ಕಿ ಸಾಮಾನ್ಯವಾಗಿ ಒಂದೇ ರೀತಿ ಇರುತ್ತದೆ ಎಂದರೆ ಸರಿ. ವಶಕ್ಕೆ ಪಡೆದ ಅಕ್ಕಿ ಯಾವ ತಳಿಯದ್ದು ಎಂದು ನನಗೆ ತಿಳಿದಿಲ್ಲ. ಸರಕಾರದಿಂದ ವಿತರಿಸುವ ಅಕ್ಕಿ ಯಾವ ತಳಿಯದ್ದು ಎಂದು ತೋರಿಸಲು ಚಾಸಾ-1 ರವರ ಬಳಿ ಯಾವುದೇ ದಾಖಲೆ ಇರಲಿಲ್ಲ. ವಶಕ್ಕೆಪಡೆದ ಚೀಲಗಳ ಮೇಲೆ ಸರಕಾರದ ಅಕ್ಕಿ ಎಂಬ ಬಗ್ಗೆ ಯಾವುದೇ

ಮೊಹರು ಇರಲಿಲ್ಲ. ನನ್ನ ಸಮಕ್ಷಮ 1ನೇ ಆರೋಪಿ 2ನೇ ಆರೋಪಿಗೆ ಸಂಬಂಧಿಸಿದ ಮನೆಯಲ್ಲಿ ಅಕ್ಕಿಯನ್ನು ಎಲ್ಲಿಂದ ಯಾವಾಗ ತಂದು ಶೇಖರಿಸಿದ್ದಾರೆ ಎಂಬ ಬಗ್ಗೆ ಚಾಸಾ-1 ರವರು ವಿಚಾರಿಸಿಲ್ಲ. ಚಾಸಾ-1 ರವರು ಅಕ್ಕಿಯನ್ನು ತೂಗಿರುತ್ತಾರೆ. ಅದನ್ನು Scale ಇಂದ ತೂಗಿರುತ್ತಾರೆ. ನಾನು ಮತ್ತು ಚಾಸಾ-1 ರವರು ಸ್ಥಳವನ್ನು ಪರಿಶೀಲಿಸಿ ಲೆಕ್ಕ ಮಾಡಲು 1 ಗಂಟೆಯಾಗಿರುತ್ತದೆ. ಅನಂತರ ದಾಖಲೆಯನ್ನು ಬರೆದಿರುತ್ತೇವೆ.

ಪಂಚನಾಮೆಯಲ್ಲಿ ಮನೆಯ ಹೊರಗಿನ ಗಡಿ ಗುರುತಿಸಲಾಗಿದೆ ಎಂದರೆ ಸರಿ. ಮನೆಯ ಒಳಗೆ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ಕೋಣೆಯ ಚೆಕ್ಕು ಬಂಧಿಯನ್ನು ಕಾಣಿಸಿಲ್ಲ. ಚಾಸಾ-3 ಮತ್ತು 4ರವರು ಅಕ್ಕಪಕ್ಕದ ಮನೆಯವರು ಅಲ್ಲ ಎಂದರೆ ಸರಿ. ಪಂಚನಾಮೆಯನ್ನು ತಯಾರಿಸಿದ ನಂತರ 7-30ಕ್ಕೆ ಪಿರ್ಯಾದನ್ನು ನೀಡಿರುತ್ತಾರೆ. ಅದರೊಂದಿಗೆ ಪಂಚನಾಮೆಯನ್ನು ಲಗತ್ತಿಸಿದ್ದರು. ಸದ್ರಿ ದಿನ ವಶಕ್ಕೆ ಪಡೆದ ಅಕ್ಕಿಯನ್ನು ಅದೇ ದಿನ ಪಿ ಎಸ್ ಐ ರವರ ವಶಕ್ಕೆ ನೀಡಿರುತ್ತಾರೆ. ವಶಕ್ಕೆ ಪಡೆದ ಅಕ್ಕಿಯನ್ನು ಪಿ ಎಸ್ ಐ ರವರಿಗೆ ನೀಡುವ ವೇಳೆಗೆ ಯಾವುದೇ ದಾಖಲಾತಿ ತಯಾರಿಸಿಲ್ಲ. ನಿಪಿ-1ನ್ನು ಚಾಸಾ-1ರವರು ಎಲ್ಲಿ ತಯಾರಿಸಿದ್ದರು ಎಂದು ನನಗೆ ತಿಳಿದಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 2ನೇ ಆರೋಪಿಯೊಂದಿಗೆ ಹೋಗಿ ಅಕ್ಕಿ ದಾಸ್ತಾನು ಇದದ್ದನ್ನು ಪತ್ತೆ ಹಚ್ಚಿಲ್ಲ ಎಂದರೆ ಸರಿಯಲ್ಲ. ಸದ್ರಿ ಮನೆ 2ನೇ ಆರೋಪಿಗೆ ಸೇರಿದ್ದು ಅಲ್ಲ ಎಂದರೆ ಸರಿಯಲ್ಲ. ಅಲ್ಲಿ 1ನೇ ಆರೋಪಿಗೆ ಸೇರಿದ ಅಕ್ಕಿ ದಾಸ್ತಾನು ಇಲ್ಲದೆ ಅದನ್ನು ನಾವು ಪತ್ತೆ ಹಚ್ಚಿಲ್ಲ ಎಂದರೆ ಸರಿಯಲ್ಲ. ವಶಕ್ಕೆ ಪಡೆದ ಅಕ್ಕಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು ಪರಿಚಯಸ್ಥರನ್ನು ಠಾಣೆಗೆ ಕರೆಯಿಸಿ ದಾಖಲೆಗಳನ್ನು ಸೃಷ್ಟಿಸಿ ಅವರ ಸಹಿಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2ನ್ನು ಎಲ್ಲಿ ತೆಗೆದಿದ್ದು ಎಂಬ ಬಗ್ಗೆ ಯಾವುದೇ ಗುರುತು ಇಲ್ಲ. ಅದನ್ನು ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**